**O.S.No.543/2016**
**D.W-1**

**<u>ಸಾಕ್ಷಿ ಯನ್ನು ದಿಃ10.10.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:</u>**

ವಾದಿಯು ನನ್ನ ತಂದೆಯ ವಿರುದ್ದ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಅಪೀಲನ್ನು ನಂಜಯ್ಯ ಬಿನ್ ಚೆನ್ನಯ್ಯ ರವರ ವಿರುದ್ದ ಹೂಡಲಾಗಿದ್ದು, ಸದರಿ ನಂಜಯ್ಯ ಬಿನ್ ಚೆನ್ನಯ್ಯ ನನ್ನ ತಂದೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ನನ್ನ ತಂದೆಗೆ ಯಾವುದೇ ರೆಜಿಸ್ಟರ್ ಪೋಸ್ಟ್ ಬಂದಿರುವುದಿಲ್ಲ. ಸದರಿ ವಾದಿ ಸಲ್ಲಿಸಿದ್ದ ಅಪೀಲು ಏನಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಅಪೀಲು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿಸಿಕೊಳ್ಳಬೇಕು ಎಂದು ವಜಾ ಆದ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ.

2. ವಾದಿಯ ದಾವಾ ಎ ಷೆಡ್ಯೂಲ್ ಬಾಬ್ತು ವಾದಿಯ ಹೆಸರಿಗೆ ಆದ ಎಂ ಆರ್ ಅನ್ನು ನಾವು ಪ್ರಶ್ನೆ ಮಾಡಿರುವುದಿಲ್ಲ. ವಾದಿಯ ಎಂ ಆರ್ ಸರಿ ಇದ್ದ ಕಾರಣ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಖರೀದಿ ಮಾಡಿದ ಬಗ್ಗೆ ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆ ಖರೀದಿ ಮಾಡುವಾಗ ಋಣಭಾರ ರಾಹಿತ್ಯ ಪತ್ರ ಮತ್ತು ಹಿಂದೆ ನಡೆದ ಕ್ರಯದ ವಹಿವಾಟುಗಳನ್ನು ಪರಿಶೀಲನೆ ಮಾಡಲಾಗಿತ್ತೇ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ವಿಚಾರ ನನ್ನ ತಂದೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

3. ಪ್ರತಿವಾದಿ 8 ರಿಂದ 10 ರವರು ದಾವಾ ಸರ್ವೆ ನಂ.36/5ರ ಮಾಲೀಕರು ಮತ್ತು ಸ್ವಾಧೀದಾರರೇ? ಎಂದರೆ ಸಾಕ್ಷಿಯು ತನಗೆ ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿ 8 ರಿಂದ 10 ರವರು ನಾಮಕಾವಸ್ಥೆ ಕ್ರಯಪತ್ರ ಮಾಡಿಕೊಂಡವರಾಗಿದ್ದು, ಸದರಿಯವರು ಮಾಲೀಕರು ಮತ್ತು ಸ್ವಾಧೀದಾರರು ಅಲ್ಲ ಎಂದರೆ ಸಾಕ್ಷಿಯು ತನಗೆ ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. 2011ಕ್ಕೂ ಮೊದಲು ಅಥವಾ ನಂತರದಲ್ಲಿಯೂ ದಾವಾ ಎ ಆಸ್ತಿಯ ಮಾಲೀಕರು ಮತ್ತು ಸ್ವಾಧೀದಾರರು ಅಲ್ಲ ಎಂದರೆ ಸಾಕ್ಷಿಯು ತಾವೇ ಮಾಲೀಕರಾಗಿದ್ದು, ತಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. 2001ರಲ್ಲೇ ವಾದಿಗೆ ಕ್ರಯಪತ್ರದ ಮೂಲಕ ಸ್ವಾಧೀನ ಹಸ್ತಾಂತರವಾದ ಕಾರಣ, 2011ರಲ್ಲಿ ನಮಗೆ ಮಾರಾಟ ಮಾಡಿದವರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

4. ಗಣಕೀಕೃತ ಪಹಣಿಯಲ್ಲಿ 2000-2001ರಲ್ಲಿ ಕಣ್ತಪ್ಪಿ ನಿಂದ ವಾದಿಯ ಹೆಸರು ನಮೂದಾಗುವ ಬದಲು ವಾದಿಯ ಮಾರಾಟಗಾರರ ಹೆಸರು ನಮೂದಾಗಿದ್ದನ್ನು ಲಾಭ ಪಡೆದು ನನ್ನ ತಂದೆ ಮತ್ತು ಪ್ರತಿವಾದಿ 8 ರಿಂದ 10 ರವರು ತಲಾ ಬೇರೆ ಬೇರೆ ಕ್ರಯಪತ್ರಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿ 8 ರಿಂದ 10 ರವರ ಕ್ರಯಪತ್ರಗಳಲ್ಲಿ ಕಾಲ್ಪನಿಕ ಚೆಕ್ಕುಬಂದಿ ತೋರಿಸಲಾಗಿದೆ ಎಂದರೆ ಸರಿಯಲ್ಲ. ನಾವು ಸೃಷ್ಟಿತ ಕ್ರಯಪತ್ರಗಳ ಆಧಾರದ ಮೇಲೆ ವಾದಿಯ ಮಾಲೀಕತ್ವವನ್ನು ಅಲ್ಲಗಳೆದು ತೊಂದರೆ ನೀಡಿರುತ್ತೇವೆ ಎಂದರೆ ಸಾಕ್ಷಿಯು ತಾನು ತೊಂದರೆ

ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.